<u>58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ</u>
<u>ಸಿಸಿಹೆಚ್-59</u>
<u>ಎಸ್.ಸಿ.ನಂ. 1319/2024</u>

ಪಿ.ಡಬ್ಲ್ಯೂ. 22
ಸಿ.ಡಬ್ಲ್ಯೂ. 90
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 05.08.2026

| | |
|---|---|
| **ಸಾಕ್ಷಿಯ ಹೆಸರು** | ಮೊಹನ್ ಕುಮಾರ್ @ ರಾಜ |
| **ತಂದೆಯ ಹೆಸರು** | ಲೇಃ ಮುನಿಯಪ್ಪ |
| **ವಯಸ್ಸು** | 29 ವರ್ಷ |
| **ವೃತ್ತಿ** | ಬಜಾಜ್ ಫೈನಾನ್ಸ ಕಂಪನಿಯಲ್ಲಿ ಕಾರು ಲೋನ್ ವಿಭಾಗದಲ್ಲಿ ಕೆಲಸ |
| **ವಾಸ ಸ್ಥಳ** | ರಾಜಾಜೇಶ್ವರಿನಗರ, ಮಾರಪ್ಪ ಲೇಔಟ್, ಬೆಂಗಳೂರು |

**<u>ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ</u>**

ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇದೆ. ದಿಃ08.06.2024 ರಂದು ನಾನು ಕೆಲಸ ಮಾಡುತ್ತಿರುವಾಗ ನನ್ನ ಸ್ನೇಹಿತನಾದ ಪುನೀತ್ (ಚಾ.ಸಾ.91)ರವರು ನನ್ನ ಮೊಬೈಲ್ ಗೆ 3 ಸೆಕೆಂಡ್‌ನ ಒಂದು ವಿಡಿಯೋ ಮತ್ತು ಒಂದು ಇಮೇಜ್‌ನ್ನು ನನ್ನ ವಾಟ್ಸಪ್‌ಗೆ ಕಳುಹಿಸಿಕೊಟ್ಟಿದ್ದರು. ನನ್ನ ಮೊ.ನಂ.7795986869 ಆಗಿರುತ್ತದೆ.

2. ಸದರಿ ವಿಡಿಯೋ one time view video ಆಗಿದ್ದು, ನಾನು ಅದನ್ನು ತೆರೆದು ನೋಡುವಷ್ಟರಲ್ಲಿ ಅದು ಡಿಲೀಟ್ ಆಗಿತ್ತು. ಅದನ್ನು ನಾನು ಸರಿಯಾಗಿ ನೋಡಿರುವುದಿಲ್ಲ. ನಾನು ನನಗೆ ಕಳುಹಿಸದ ಇಮೇಜ್‌ನ್ನು ಡೌನ್ ಲೋಡ್ ಮಾಡಿ ನೋಡಿರುತ್ತೇನೆ. ಸದರಿ ಫೋಟೋದಲ್ಲಿ ದರ್ಶನ್ ಮತ್ತು

ಪುನೀತ್‌ರವರು ಅಕ್ಕಪಕ್ಕ ನಿಂತುಕೊಂಡಿದ್ದ ಫೋಟೋವಾಗಿತ್ತು. ಆನಂತರ ನಾನು ಸದರಿ ಪುನೀತ್‌ಗೆ ಕರೆ ಮಾಡಿ ವಿಡಿಯೋ ಏನೋ ಇದು ಎಂದು ವಿಚಾರಿಸಿದಾಗ, ಆತ ನನಗೆ ಆ ಮೇಲೆ ತಿಳಿಸುತ್ತೇನೆ, ಅವರ ಯಾರು ಎಂದು ಮತ್ತು ಅವರ ಹೆಸರು ಏನು ಎಂದು ನನಗೆ ತಿಳಿದಿಲ್ಲ ಎಂದು ಹೇಳಿದನು.

3. ಪುನೀತ್ ತಾನು ಗೋಡೋನ್‌ನಲ್ಲಿ ಕೆಲಸ ಮಾಡುತ್ತಿದ್ದು, ಯಾರನ್ನೋ ಯಾರೋ ಕರೆದುಕೊಂಡು ಬಂದಿದ್ದರು ಎಂದು ನನಗೆ ತಿಳಿಸಿದ್ದ. ಆ ಸಮಯದಲ್ಲಿ ಯಾರನ್ನು ಕರೆದುಕೊಂಡು ಬಂದಿದ್ದರು ಎಂದು ತಿಳಿದಿರುವುದಿಲ್ಲ. 2-3 ದಿನಗಳ ನಂತರ ನಾನು ಟಿವಿಯಲ್ಲಿ ನೋಡಿದಾಗ, ಅವರು ಯಾರೋ ಕೊಲೆಯಾಗಿದ್ದಾರೆ ಎಂದು ತಿಳಿದುಬಂತು. ಕೊಲೆಯಾದ ವ್ಯಕ್ತಿಯ ಹೆಸರು ರೇಣುಕಾಸ್ವಾಮಿ ಎಂದು ತಿಳಿದುಬಂತು.

4. ಪುನೀತ್‌ರವರು ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನು ಕರೆದುಕೊಂಡು ಬಂದಿದ್ದರು ಎಂದು ನನಗೆ ತಿಳಿಸಿದರು. ಈ ಪ್ರಕರಣಕ್ಕೆ ಸಂಬಂದಿಸಿದಂತೆ ನನ್ನನ್ನು ಪೊಲೀಸರು ವಿಚಾರಣೆಗೆ ದಿಃ20.06.2024 ರಂದು ಕರೆದಿದ್ದರು. ಪೊಲೀಸರು ನನ್ನನ್ನು ಪುನೀತ್ ಕಳುಹಿಸಿಕೊಟ್ಟ ವಿಡಿಯೋ ಮತ್ತು ಇಮೇಜ್ ಬಗ್ಗೆ ಕೇಳಿದ್ದರು ಹಾಗೂ ಅವುಗಳನ್ನು ತೋರಿಸಲು ತಿಳಿಸಿದರು. ಪೊಲೀಸರಿಗೆ ನಾನು ವಿಡಿಯೋ ಮತ್ತು ಫೋಟೋ ಡಿಲೀಟ್ ಆಗಿರುತ್ತದೆ ಎಂದು ಹೇಳಿರುತ್ತೇನೆ. ಪೊಲೀಸರು ನನಗೆ ನೋಟೀಸ್‌ನ್ನು ಕೊಟ್ಟಿದ್ದರು ಮತ್ತು

ನ್ಯಾಯಾಲಯಕ್ಕೂ ಸಹ ಕರೆದುಕೊಂಡು ಬಂದು ಹೇಳಿಕೆ ಪಡೆದುಕೊಂಡು ಬಂದಿದ್ದರು.

5. ಸಾಕ್ಷಿಗೆ ಈಗ ದಿಃ19.06.2024 ರಂದು ಕಲಂ 160 ರ ಅಡಿ ನೀಡಿದ ನೋಟೀಸ್‌ನ್ನು ತೋರಿಸಿದಾಗ, ಸದರಿ ನೋಟೀಸ್‌ನ್ನು ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನೋಟೀಸ್‌ನ್ನು **ನಿ.ಪಿ.155** ಮತ್ತು ಸಾಕ್ಷಿಯ ಸಹಿಯನ್ನು **ನಿ.ಪಿ.155(ಎ)** ಎಂದು ಗುರುತಿಸಲಾಯಿತು.

6. ನಾನು ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ದಿಃ20.06.2024 ರಂದು ನಾನು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯ ಪೊಲೀಸರಿಗೆ ನನ್ನ ಮೊಬೈಲ್‌ನ್ನು ಹಾಜರುಪಡಿಸಿರುತ್ತೇನೆ. ನಂತರ ಪೊಲೀಸರು ನನ್ನ ಮೊಬೈಲ್ ನ್ನು ಕವರ್ ಗೆ ಹಾಕಿ ಸೀಲ್ ಮಾಡಿದರು. ಅದಾದ ಒಂದು ವಾರದ ಒಳಗೆ, ನಾನು ನ್ಯಾಯಾಲಯಕ್ಕೆ ಹೋಗಿ ನನ್ನ ಹೇಳಿಕೆ ನೀಡಿರುತ್ತೇನೆ.

7. ನಾನು ನ್ಯಾಯಾಲಯದ ಹೇಳಿಕೆಯಲ್ಲಿ ಈ ಕೆಳಗಿನಂತೆ ನುಡಿದಿರುತ್ತೇನೆ; ದಿಃ08.06.2024 ರಂದು ಪುನೀತ್ ಗೋಡೋನ್‌ನಲ್ಲಿ ಕೆಲಸ ಮಾಡುತ್ತಿರುವಾಗ, ನಾನು ಕೂಡ ನನ್ನ ಕೆಲಸದಲ್ಲಿ ಇದ್ದೆ. ಆ ಸಮಯದಲ್ಲಿ 3

ಸೆಕೆಂಡ್‌ನ one view video ಮತ್ತು ಒಂದು ಫೋಟೋವನ್ನು ಆತ ನನಗೆ ಕಳುಹಿಸಿರುತ್ತಾರೆ. ಆ ವಿಡಿಯೋವನ್ನು ನಾನು ಸ್ಪಷ್ಟವಾಗಿ ನೋಡಿರುವುದಿಲ್ಲ. ನಂತರ ನಾನು ಪುನೀತ್‌ಗೆ ಕರೆ ಮಾಡಿದಾಗ, ಆತ ಯಾರನ್ನೋ ಕರೆದುಕೊಂಡು ಬಂದಿದ್ದಾರೆ ಆಮೇಲೆ ಮಾಡುತ್ತೇನೆ ಎಂದು ಹೇಳಿದ. 2-3 ದಿನಗಳ ನಂತರ ನಾನು ಟಿವಿಯಲ್ಲಿ ನೋಡಿದಾಗ ಕರೆದುಕೊಂಡು ಬಂದ ವ್ಯಕ್ತಿ ರೇಣುಕಾಸ್ವಾಮಿ ಎಂದು ನನಗೆ ತಿಳಿದುಬಂದಿದ್ದು, ಆಗ ನಾನು ಅವರ ಹೆಸರನ್ನು ಹೇಳಿರುತ್ತೇನೆ.

8. ನಾನು ನ್ಯಾಯಾಲಯದಲ್ಲಿ ಹೇಳಿಕೆ ನೀಡಿದಾಗ, ನನ್ನ ಹೇಳಿಕೆಗೆ ಸಹಿ ಮಾಡಿದ್ದೇನೆ. ನ್ಯಾಯಾಲಯದಲ್ಲಿ ನಾನು ನೀಡಿದ ಹೇಳಿಕೆಯನ್ನು ನನಗೆ ಓದಿ ಹೇಳಿರುತ್ತಾರೆ. ನ್ಯಾಯಾಲಯದಲ್ಲಿ ನಾನು ನೀಡಿದ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ.

10. ಈ ದಿನ ನ್ಯಾಯಾಲಯದಲ್ಲಿ, ಒಂದು ಪತ್ರದೊಂದಿಗೆ ಪತ್ರ ಸಂ.201/2024, dtd. 25.06.2024 ರೊಂದಿಗೆ ಸೀಲಿನಿಂದ ಕೂಡಿದ ಒಂದು ಕವರ್ 24 ನೇ ಎಸಿಎಂಎಂ ನ್ಯಾಯಾಲಯದಿಂದ ಬಂದಿದ್ದು ಅದು ಭಾ.ದಂ.ಪ್ರ.ಕಿ.ಸಂ.164 ರಡಿಯಲ್ಲಿ ಮಾಡಿಕೊಂಡ ಶಶಿಕುಮಾರ್, ಬಿನ್ ಯತಿರಾಜ್ ಮತ್ತು ಮೋಹನ್ ಕುಮಾರ್.ಎಂ, ಬಿನ್ ಮುನಿಯಪ್ಪನವರ ಹೇಳಿಕೆಯನ್ನು ಒಳಗೊಂಡಿದೆ ಎಂದು ಬರೆದಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಎಸ್‌ಪಿಪಿ ಮತ್ತು ಮಾನ್ಯ ಆರೋಪಿಗಳ ಪರ

ವಕೀಲರ ಸಮಕ್ಷಮ ತೆರೆಯಲಾಯಿತು. ಸದರಿ ಕವರ್ ನ್ನು ತೆರೆದು ನೋಡಲಾಗಿ ಅದರಲ್ಲಿ ಶಶಿಕುಮಾರ್ ಬಿನ್ ಯತಿರಾಜ್(ಚಾ.ಸಾ.75) ಮತ್ತು ಮೋಹನ್ ಕುಮಾರ್.ಎಂ ಬಿನ್ ಮುನಿಯಪ್ಪನವರ ಹೇಳಿಕೆಗಳು ಇದ್ದವು. ಮೊಹನ್ ಕುಮಾರ್ ರವರ ಹೇಳಿಕೆಯನ್ನು ಹೊರೆತೆಗೆದುಕೊಂಡು ಶಶಿಕುಮಾರ್ ರವರ ಹೇಳಿಕೆಯನ್ನು ವಾಪಸ್ಸ ಅದೇ ಕವರ್ ನಲ್ಲಿ ಹಾಕಲಾಯಿತು.

11. ಮೊಹನ್ ಕುಮಾರ್ ಹೇಳಿಕೆಯನ್ನು ಮತ್ತು memorandum ನ್ನು ಸಾಕ್ಷಿಗೆ ತೋರಿಸಿದಾಗ, ಸಾಕ್ಷಿ ಸದರಿ ಎರಡು ದಾಖಲೆಗಳನ್ನು ಮತ್ತು ಅದರಲ್ಲಿ ಇರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

12. At this stage, Ld. Defence counsel for all the accused objected for marking statement of the witness recorded U/Sec. 164 of Cr.P.C. Ld. Counsel for A1 & 12 submitted that statement may be marked subject to objections.

13. Ld. SPP submits as the witness has stated

that he went to court and given his statement and he has identified his statement and signature in the statement, the statement may be marked.

14. Ld. Counsel for A11 submits that the statement of the witness recorded U/Sec. 164 of Cr.P.C cannot be recorded in Ex.P-series and it may be recorded as court document as Ex.C-series.

15. Ld. Designated Sr. Counsel for A2 submitted that as the witness has not fully supported the contents of the statement, it cannot be marked.

16. Ld. Counsel for A4,6,10,13 & 15 to 17 submitted that if attention of the witness is drawn to the contents of the document and the witness is made to view the document, it amounts to leading. It can only be confronted in the cross examination and hence objected for marking of the statement.

17. The bar U/Sec. 162 of Cr.P.C is applicable only to the statements recorded U/Sec. 161 of Cr.P.C and not to the statements recorded by the Judicial Magistrate U/Sec. 164 of Cr.P.C. Therefore, the statement of the witness recorded U/Sec. 164 of Cr.P.C by the Judicial Magistrate is marked subject to objections. ಸಾಕ್ಷಿಯ ಹೇಳಿಕೆಯನ್ನು **ನಿ.ಪಿ.156** ಮತ್ತು ಈ ಸಾಕ್ಷಿಯ ಎರಡು ಸಹಿಗಳನ್ನು **ನಿ.ಪಿ.156(ಎ ಮತ್ತು ಬಿ)** ಮತ್ತು Memorandum ನ್ನು **ನಿ.ಪಿ.157** ಮತ್ತು ಸಾಕ್ಷಿಯ ಸಹಿಯನ್ನು **ನಿ.ಪಿ.157(ಎ)** ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

18. ದಿಃ04.10.2024 ರಂದು ಪೊಲೀಸರು ನನಗೆ ಠಾಣೆಗೆ ಬರಲು ತಿಳಿಸಿದ್ದರು. ಆದರೆ ನಾನು ದಿಃ02.10.2024 ರಂದು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನಗೆ ಠಾಣೆಗೆ ಬರಲು ನೋಟೀಸ್ ನೀಡಿದ್ದರು. ಸದರಿ ನೋಟೀಸ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿಃ02.10.2024 ರ ನೋಟೀಸ್‌ನ್ನು ತೋರಿಸಿದಾಗ, ಸಾಕ್ಷಿ ಸದರಿ ನೋಟೀಸ್ ನ್ನು ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನೋಟೀಸ್‌ನ್ನು **ನಿ.ಪಿ.158** ಮತ್ತು ಈ ಸಾಕ್ಷಿಯ ಸಹಿಯನ್ನು

**ನಿ.ಪಿ.158(ಎ)** ಎಂದು ಗುರುತಿಸಲಾಯಿತು.

19. ನಾನು ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ನನಗೆ ದಿಃ11.06.2024 ರಂದು ಪುನೀತ್(ಚಾ.ಸಾ.91) ಮತ್ತು ನಾನು ಎಲ್ಲಿಗೆ ಹೋಗಿದ್ದೆವು ಎಂದು ವಿಚಾರಣೆ ಮಾಡಿದರು. ಆಗ ನಾನು ಆ ದಿನ ನಾನು ಮತು ಪುನೀತ್, ನಮ್ಮ ಸ್ನೇಹಿತ ಮಂಜುನಾಥರವರ ಅಕ್ಕನ ಬೀಗರ ಊಟಕ್ಕೆಂದು ಚನ್ನಪಟ್ಟಣದ ಹತ್ತಿರ ಇರುವ ಕಬ್ಬಾಳಮ್ಮ ದೇವಸ್ಥಾನಕ್ಕೆ ಹೋಗಿದ್ದೆವು. ಆ ದಿನ ನಾವು ಇಬ್ಬರು ಕಾರಿನಲ್ಲಿ ಸದರಿ ದೇವಸ್ಥಾನಕ್ಕೆ ಹೋಗಿ ವಾಪಸ್ಸು ಬರುವಾಗ, ಮಾರ್ಗ ಮಧ್ಯೆ ಪುನೀತ್ ಕಾರನ್ನು ನಿಲ್ಲಿಸಿ ಒಂದು ಚಿಕ್ಕ ಫೋನ್‌ನ್ನು ಖರೀದಿಸಿದ್ದ. ಅದು keypad phone ಆಗಿತ್ತು. ಆಗ ಪುನೀತ್‌ಗೆ ಏತಕ್ಕೆ ಈ ಫೋನ್‌ನನ್ನು ಖರೀದಿಸಿದ್ದೀಯ ಎಂದು ವಿಚಾರಿಸಿದಾಗ, ಆತ ನನಗೆ ಸ್ವಲ್ಪ ಕೆಲಸ ಇದ್ದು ಅದಕ್ಕೆ ಬೇಕಾಗಿದೆ ಎಂದು ತಿಳಿಸಿದ್ದ. ನಂತರ ನಾವು ಇಬ್ಬರು ಬೆಂಗಳೂರಿಗೆ ಬಂದು ನಮ್ಮ ನಮ್ಮ ಮನೆಗೆ ಹೋಗಿರುತ್ತೇವೆ. ನಂತರ ಮತ್ತೆ ನಾವಿಬ್ಬರು ಪೊಲೀಸ್ ಠಾಣೆಯಲ್ಲಿ ವಿಚಾರಣೆ ಸಮಯದಲ್ಲಿ ಬೇಟಿಯಾಗಿರುತ್ತೇವೆ.

20. ದಿಃ20.06.2024 ರಂದು ಪೊಲೀಸರು ನನ್ನ ಮೊಬೈಲ್ಲನ್ನು ವಶಪಡಿಸಿಕೊಂಡಿದ್ದು, ನಂತರ ನನ್ನ ಮೊಬೈಲ್‌ನ್ನು, ಏಪ್ರಿಲ್ ತಿಂಗಳ 2025 ರಂದು ನ್ಯಾಯಾಲಯದ ಆದೇಶದಿಂದ ನನ್ನ ವಶಕ್ಕೆ ಬಿಡುಗಡೆ

ಮಾಡಿಸಿಕೊಂಡಿರುತ್ತೇನೆ. ಸದರಿ ಮೊಬೈಲ್‌ನ್ನು ಈ ದಿನ ನಾನು ನ್ಯಾಯಾಲಯದ ಆದೇಶದಂತೆ ಹಾಜರುಪಡಿಸರುತ್ತೇನೆ. ಸಾಕ್ಷಿ ತಮ್ಮ iPhone 15+ ಮೊಬೈಲ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

21. ನ್ಯಾಯಾಲಯದವರು ಮಾಡಿದ ಬಿಡುಗಡೆ ಆದೇಶ, ದಿಃ23.04.2025 ಮತ್ತು ಪೊಲೀಸ್ ಠಾಣೆಯಲ್ಲಿ ತೆಗೆದ ಒಂದು ಫೋಟೋವನ್ನು ಸಾಕ್ಷಿಗೆ ತೋರಿಸಿದಾಗ, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಬಿಡುಗಡೆ ಆದೇಶದಲ್ಲಿ ತಾವು ತಮ್ಮ ಮೊಬೈಲ್ ಪಡೆದುಕೊಂಡ ಬಗ್ಗೆ ನಮೂದಿಸಿ ಸಹಿ ಮಾಡಿರುವುದನ್ನು ಸಹ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಆದೇಶವನ್ನು **ನಿ.ಪಿ.159** ಮತ್ತು ಅದರ ಹಿಂಭಾಗದಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.159(ಎ)** ಎಂದು ಗುರುತಿಸಲಾಯಿತು. ಫೋಟೋವನ್ನು **ನಿ.ಪಿ.160** ಎಂದು ಗುರುತಿಸಲಾಯಿತು. ಸದರಿ ಮೊಬೈಲ್ iPhone 15+ ಕಪ್ಪು ಬಣ್ಣದ್ದಾಗಿದ್ದು, ಅದನ್ನು ಸಾಕ್ಷಿ *#06# dial ಮಾಡಿ ತೋರಿಸಿದಾಗ, ಅದರಲ್ಲಿ IMEI No. 359793755858583 ಮತ್ತು IMEI2 No.359793755176010 ಆಗಿರುತ್ತದೆ ಎಂದು ತೋರಿಸಿರುತ್ತಾರೆ. ಅದೇ ಸಿಮ್ ನಂಬರ್ 7795986869 ಈಗಲೂ ಸಹ ಚಾಲ್ತಿಯಲ್ಲಿ ಇದೆ ಎಂದು ನುಡಿಯುತ್ತಾರೆ. ದಿಃ20.06.2024 ರಂದು ಪೊಲೀಸರು ನಿ.ಪಿ.137 ರ ಮೂಲಕ ಇದೇ

ಮೊಬೈಲ್‌ನ್ನು ತಮ್ಮ ವಶಕ್ಕೆ ಪಡೆದು ಸೀಲ್ ಮಾಡಿ ಕವರ್ ನಲ್ಲಿ ಹಾಕಿದ್ದರು. ಸದರಿ ಮೊಬೈಲ್‌ನ್ನು **ನಿ.ಪಿ.161** ಎಂದು ಗುರುತಿಸಲಾಯಿತು. (ಸಾಕ್ಷಿಗೆ ಈ ಮೊಬೈಲ್‌ನ್ನು ತಮ್ಮ ವಿಚಾರಣೆ ಮುಗಿಯುವವರೆಗೆ ನ್ಯಾಯಾಲಯಕ್ಕೆ ತರಬೇಕು ಎಂದು ತಿಳಿಸಿ, ಸದರಿ ಮೊಬೈಲ್‌ನ್ನು ಅವರ ವಶಕ್ಕೆ ವಾಪಸ್ಸು ನೀಡಲಾಯಿತು).

(ಈ ಹಂತದಲ್ಲಿ ಮಾನ್ಯ ಪ್ರಾಜ್ಞ ಎಸ್‌ಪಿಪಿರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟಿಸವಾಲುಃ ಮಾನ್ಯ ಪ್ರಾಜ್ಞ ಎಸ್‌ಪಿಪಿ ರವರಿಂದಃ**

22. ಸಾಕ್ಷಿಗೆ ಈಗ ಅವರು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯನ್ನು ತೋರಿಸಿ, ಇದೇ ಹೇಳಿಕೆಯನ್ನು ನೀವು ದಿಃ25.06.2024 ರಂದು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಾನು ಸದರಿ ಹೇಳಿಕೆಯಲ್ಲಿ ಹೇಳಿರುವ ಅಂಶಗಳು ಸತ್ಯವಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಟಿವಿಯಲ್ಲಿ ಬಂದಿರುವ ಕೆಲವು ಅಂಶಗಳನ್ನು ಸಹ ನೋಡಿ ಹೇಳಿಕೆ ನೀಡಿದ್ದೆ ಎನ್ನುತ್ತಾರೆ.

23. ಸದರಿ ಹೇಳಿಕೆಯಲ್ಲಿ ನಾನು " ನನಗೆ ಒಂದು 3 ಸೆಕೆಂಡ್ ಸಮಯದ ಒಂದು ವಿಡಿಯೋವನ್ನು ಕಳುಹಿಸಿದ್ದರು, ಆ ವಿಡಿಯೋದಲ್ಲಿ ಒಬ್ಬ ಮಲಗಿದ್ದ ರೀತಿಯಲ್ಲಿ ಇತ್ತು. ಆ ವಿಡಿಯೋ ನೋಡಿ ನಾನು ಅವನಿಗೆ ಕರೆ ಮಾಡಿ ಏನು ಇದು ಎಂದು ಕೇಳಿದಾಗ ಅದಕ್ಕೆ ಅವನು, ಚಿತ್ರ ನಟ ದರ್ಶನ್

ಪ್ರೇಯಸಿ ಪವಿತ್ರಾ ಗೌಡಗೆ ಕೆಟ್ಟದಾಗಿ ಸಂದೇಶವನ್ನು ಕಳುಹಿಸಿದ ಎಂದು ಚಿತ್ರದುರ್ಗದಿಂದ ಪಟ್ಟಣಗೆರೆ ಜಯಣ್ಣ ಶೆಡ್ಡಿಗೆ ಕರೆದುಕೊಂಡು ಬಂದು ಚಿತ್ರ ನಟ ದರ್ಶನ್ ಮನೆಯಲ್ಲಿ ಕೆಲಸ ಮಾಡುವ ಪವನ್, ಧನರಾಜ್ ಮತ್ತು ನಂದೀಶ್ ರವರು ಹೊಡೆದರು ಎಂದನು. ನಾನು ಹೌದಾ ಎಂದು ಹೇಳಿದೆನು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಟಿವಿ ನೋಡಿ ಹೇಳಿದ್ದೇನೆ ಎನ್ನುತ್ತಾರೆ.

24. ಸದರಿ ಹೇಳಿಕೆಯಲ್ಲಿ ನಾನು "ಮಂಗಳವಾದ ಟಿವಿ ನೋಡಿದಾಗ ಗೊತ್ತಾಗಿದ್ದು ಏನೆಂದರೆ ನನಗೆ ಕಳುಹಿಸಿದ ವಿಡಿಯೋದಲ್ಲಿ ಇದ್ದ ಹುಡುಗನ ಹೆಸರು ರೇಣುಕಾಸ್ವಾಮಿ ಎಂದು ತಿಳಿಯಿತು. ಅವನಿಗೆ ಚಿತ್ರ ನಟ ದರ್ಶನ್, ಪವನ್ ಮತ್ತು ಚಿತ್ರದುರ್ಗದ ಹುಡುಗರು ಧನರಾಜ್ ಸೇರಿ ಕೊಲೆ ಮಾಡಿರುತ್ತಾರೆ ಎಂದು ಟಿವಿ ನೋಡಿ ತಿಳಿಯಿತು." ಎಂದು ಹೇಳಿಕೆ ನೀಡಿದ್ದೇನೆ ಎಂದು ಸರಿ.

25. ನನ್ನ ಸ್ನೇಹಿತ ಪುನೀತ್ 3 ಸೆಕೆಂಡ್‌ನ ವಿಡಿಯೋ ನನಗೆ ಕಳುಹಿಸಿದ್ದ ಎಂದರೆ ಸರಿ. ನನಗೆ ಕಳುಹಿಸಿದ ವಿಡಿಯೋವನ್ನು ಟಿವಿಯಲ್ಲಿ ನೋಡಿ ತಿಳಿದುಕೊಂಡಿಲ್ಲ ಎಂದರೆ, ಸಾಕ್ಷಿ ನಾನು ಸರಿಯಾಗಿ ವಿಡಿಯೋ ನೋಡಿಲ್ಲ ಎನ್ನುತ್ತಾರೆ. ಆ ವಿಡಿಯೋದಲ್ಲಿ ಒಬ್ಬ ಮಲಗಿದ್ದ ರೀತಿಯಲ್ಲಿ ಇತ್ತು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದು, ಅದೇ ಆ ವಿಡಿಯೋದಲ್ಲಿ ಇತ್ತು ಎಂದರೆ, ಸಾಕ್ಷಿ ನಾನು

ಟಿವಿಯಲ್ಲಿ ನೋಡಿದಾಗ, ಅದೇ ರೀತಿ ಇದ್ದ ಕಾರಣ ನಾನು ಆ ರೀತಿ ಹೇಳಿದ್ದೆ ಎನ್ನುತ್ತಾರೆ.

26. ನಾನು ನನ್ನ ಹೇಳಿಕೆಯಲ್ಲಿ ಆ ವಿಡಿಯೋ ನೋಡಿ ನಾನು ಕರೆ ಮಾಡಿದ್ದೆ ಎಂದು ಹೇಳಿದ್ದೇನೆ ಎಂದರೆ, ಸಾಕ್ಷಿ ನಾನು ಫೋಟೋ ನೋಡಿದ್ದೇನೆ ವಿಡಿಯೋ ನೋಡಿಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯದಲ್ಲಿ ಹೇಳಿಕೆ ಕೊಟ್ಟಾಗ ನಾನು ಆ ವಿಡಿಯೋವನ್ನು ನೋಡಿಲ್ಲ ಎಂದು ಹೇಳಿರುವುದಿಲ್ಲ ಎಂದರೆ, ಸಾಕ್ಷಿ ವಿಚಾರಣೆ ಸಮಯದಲ್ಲಿ ಪುನೀತ್ ನನಗೆ ಅದೇ ವಿಡಿಯೋ ಕಳುಹಿಸಿಕೊಟ್ಟಿದ್ದೆ ಎಂದು ಹೇಳಿದ್ದ ಎನ್ನುತ್ತಾರೆ. ನಾನು ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ ವಿಡಿಯೋ ನೋಡಿರುವುದಿಲ್ಲ ಎಂದು ಹೇಳಿರುವುದಿಲ್ಲ ಎಂದರೆ, ಸಾಕ್ಷಿ ನ್ಯಾಯಾಲಯದಲ್ಲಿ ನಾನು ವಿಡಿಯೋ ನೋಡಿದ್ದೇನೆ ಎಂದು ಹೇಳಿದ್ದೆ ಏಕೆಂದರೆ ವಿಚಾರಣೆ ಸಮಯದಲ್ಲಿ ಪುನೀತ್ ಕಳುಹಿಸಿರುವ ವಿಡಿಯೋ ಅದೇ ಎಂದು ನನಗೆ ಹೇಳಿದ್ದ ಕಾರಣ ನಾನು ಹೇಳಿದ್ದೇನೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಫೋನ್‌ನಲ್ಲಿ ಅ ವಿಡಿಯೋ ನೋಡಿಲ್ಲ, ಟಿವಿಯಲ್ಲಿ ನೋಡಿದ್ದೆ ಎನ್ನುತ್ತಾರೆ.

27. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿಃ08.06.2024 ರಂದು ನಾನು ಕೆಲಸದ ಮೇಲೆ ಇದ್ದಾಗ, ನಮ್ಮ ಬಳಿ ಇರುವ ನನ್ನ ಸ್ನೇಹಿತನಾದ ಪುನೀತ್ (ಕುಂಟ ಪುನೀತ್) ಎಂಬುವವನು ಮಧ್ಯಾಹ್ನ

ಸುಮಾರು 2.30 -3.00 ಗಂಟೆ ಸಮಯದಲ್ಲಿ ಒಂದು ಫೋಟೋವನ್ನು ನನ್ನ ವಾಟ್ಸಪ್‌ಗೆ ಕಳುಹಿಸಿದ್ದ ಎಂದರೆ ಸರಿ.

28. ಅದರಲ್ಲಿ ಒಬ್ಬ ವ್ಯಕ್ತಿ ಮಲಗಿದ್ದ ತರಹ ಇದ್ದ ಫೋಟೋ ಮತ್ತು 3 ಸೆಕೆಂಡ್‌ಗಳ ವಿಡಿಯೋ ಹಾಕಿದ್ದನು, ನಾನು ವಾಪಸ್ಸು ಫೋನ್ ಮಾಡಿ ಏನು ಇದು ಎಂದು ಕೇಳಿದ್ದೆ ಎಂದರೆ ಸಾಕ್ಷಿ ಅದು ಮಲಗಿದ್ದ ಫೋಟೋ ಅಲ್ಲ ಪುನೀತ್ ಮತ್ತು ದರ್ಶನ್‌ರವರ ಫೋಟೋ ಎಂದು ನುಡಿಯುತ್ತಾರೆ.

29. ನಾನು ಪುನೀತ್‌ಗೆ ಕರೆ ಮಾಡಿ ಕೇಳಿದಾಗ, ಈ ವ್ಯಕ್ತಿ ದರ್ಶನ ಪ್ರೇಯಸಿಯಾದ ಪವಿತ್ರ ಗೌಡರವರಿಗೆ ಕೆಟ್ಟದಾಗಿ ಮೆಸೇಜ್ ಮತ್ತು ಫೋಟೋಗಳನ್ನು ಹಾಕುತ್ತಿದ್ದ ವ್ಯಕ್ತಿ ಈತನನ್ನು ನಾನು ಕೆಲಸ ಮಾಡುವ ಶೆಡ್ ಗೆ ಚಿತ್ರದುರ್ಗದ ಹುಡುಗರು ಕರೆದುಕೊಂಡು ಬಂದಿರುತ್ತಾರೆ ಎಂದು ಹೇಳಿದ್ದ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಟಿವಿ ನೋಡಿ ಆ ರೀತಿ ಹೇಳಿಕೆ ನೀಡಿದ್ದೇನೆ ಎನ್ನುತ್ತಾರೆ.

30. ಸದರಿ ಹೇಳಿಕೆಯಲ್ಲಿ ನಾನು ಆತನಿಗೆ ದರ್ಶನ್ ಮನೆಯಲ್ಲಿ ಕೆಲಸ ಮಾಡುವ ಪವನ್, ಧನರಾಜ್ ಮತ್ತು ನಂದೀಶ ರವರು ಹೊಡೆದಿರುತ್ತಾರೆ ಎಂದು ತಿಳಿಸಿದ್ದ, ಅದಕ್ಕೆ ನಾನು ಹೌದಾ, ಈ ಪಾರ್ಟಿ ಈಗ್ಗೆ ಮಾಡುತ್ತಿದ್ದಾನಾ ಎಂದು ಕೇಳಿದೆ. ನಂತರ ಆ ಫೋಟೋ ಮತ್ತು ವಿಡಿಯೋವನ್ನು ನಾನು

ಡಿಲೀಟ್ ಮಾಡಿರುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿ.

31. ದಿಃ20.06.2024 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ನನ್ನ ಮೊಬೈಲ್ ಕೊಟ್ಟಾಗ, ಅಲ್ಲಿ ಪೊಲೀಸರು ಬರವಣಿಗೆ ಮಾಡಿ ನನ್ನ ಸಹಿಯನ್ನು ಬರವಣಿಗೆ ಮೇಲೆ ತೆಗೆದುಕೊಂಡಿದ್ದರು. ಸಾಕ್ಷಿಗೆ ಈಗ ದಿಃ20.06.2024 ರಂದು ಅಮಾನತ್ತು ಮಹಜರ್ ನ್ನು ತೋರಿಸಿದಾಗ, ಸಾಕ್ಷಿ ಅದರ ಕೊನೆ ಪುಟದಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ಈಗಾಗಲೇ ನಿ.ಪಿ.137 ಎಂದು ಈಗಾಗಲೇ ಗುರುತಿಸಿದ್ದು, ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.137(ಬಿ)** ಎಂದು ಗುರುತಿಸಲಾಯಿತು. ನಾನು ಆ ದಿನ ನನ್ನ ಮೊಬೈಲ್‌ನ್ನು ಹಾಜರುಪಡಿಸುವ ಸಮಯದಲ್ಲಿ ಒಂದು ಫೊಟೋವನ್ನು ತೆಗೆದುಕೊಂಡಿದ್ದರು ಎಂದರೆ ಸರಿ. ಸಾಕ್ಷಿಗೆ ಈಗ ಎರಡು ಫೊಟೋಗಳನ್ನು ತೋರಿಸಿದಾಗ, ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೊಟೋಗಳನ್ನು ಈಗಾಗಲೇ ಒಟ್ಟಾಗಿ ನಿ.ಪಿ.136 ಎಂದು ಗುರುತಿಸಲಾಗಿದೆ. (ಸರಿದ ಫೊಟೋಗಳನ್ನು ಪ್ರಾ.ಸಾ.19 ರವರ ಸಾಕ್ಷ್ಯ ವಿಚಾರಣೆ ಸಮಯದಲ್ಲಿ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ). ಸದರಿ ಫೊಟೋಗಳಲ್ಲಿ ತಾವು ಮತ್ತು ಪುನೀತ್(ಚಾ.ಸಾ.91) ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೊಟೋದಲ್ಲಿ ಇರುವ ಪುನೀತ್‌ರವರ ಫೊಟೋವನ್ನು ನಿ.ಪಿ.136(ಎ) ಎಂದು ಮತ್ತು ಈ ಸಾಕ್ಷಿಯ

ಫೋಟೋವನ್ನು ನಿ.ಪಿ.136(ಬಿ) ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಫೋಟೋಗಳಲ್ಲಿ ಇರುವ ಇಬ್ಬರು ಪೊಲೀಸ್ ಸಿಬ್ಬಂದಿಗಳು ಗೊತ್ತು, ಬೇರೆಯವರು ಗೊತ್ತಿಲ್ಲ. ಸದರಿ ಫೋಟೋಗಳಲ್ಲಿ ಎಡಗಡೆ ಇರುವ ಇಬ್ಬರು ವ್ಯಕ್ತಿಗಳು ಸದರಿ ಪಂಚನಾಮೆಯ ಪಂಚಸಾಕ್ಷಿಗಳು ಎಂದರೆ ಸರಿ.

32. ನನ್ನ ಸ್ನೇಹಿತ ಪುನೀತ್ ಕಳುಹಿಸಿದ ಫೋಟೋ ಮತ್ತು ವಿಡಿಯೋದಲ್ಲಿ ಒಬ್ಬ ವ್ಯಕ್ತಿ ಮಲಗಿದ್ದ ರೀತಿಯಲ್ಲಿ ಇತ್ತು ಎಂದರೆ ಸಾಕ್ಷಿ ನಾನು ವಿಡಿಯೋ ನೋಡಿಲ್ಲ ಎನ್ನುತ್ತಾರೆ. ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ವಿಡಿಯೋ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ನೇಹಿತ ಕಳುಹಿಸಿದ ವಿಡಿಯೋವನ್ನು ನಾನು ನೋಡಿಲ್ಲ ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಮಯ 2.20p.m., ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದು, ಪಾಟೀಸವಾಲಿಗೆ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ 05.08.2026 ರಂದು ಮಧ್ಯಾಹ್ನ 3.50 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟೀಸವಾಲು ಆರೋಪಿಗಳ ಪರ ವಕೀಲರಿಂದಃ</u>**

33. ಮಾನ್ಯ ಆರೋಪಿಗಳ ಪರ ವಕೀಲರು ಹಾಜರು ಇದ್ದು, Application U/Sec. 340 of BNSS ಕುರಿತು ವಾದ ಮಂಡಿಸಿದರು. ಸದರಿ ಅರ್ಜಿಯ ಆದೇಶದವನ್ನು ಕಾಯ್ದಿರಿಸಲಾದ ಕಾರಣ, ಪಾಟಿಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ 11.08.2026 ರಂದು ಮಧ್ಯಾಹ್ನ 4.15 ಗಂಟೆಗೆ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟೆಸವಾಲು 2 ನೇ ಆರೋಪಿ ಪರ ಪದಾಂಕಿತ ಹಿರಿಯ ಶ್ರೀ. ಹೆಚ್.ಪಿ ವಕೀಲರಿಂದಃ</u>**

34. 2024 ರಲ್ಲಿ ನಮ್ಮ ಮನೆಯಲ್ಲಿ ಟಿವಿ ಇತ್ತು. ನಿಮಗೆ regular ಆಗಿ ಟಿವಿಯಲ್ಲಿ ನ್ಯೂಸ್ ನೋಡುವ ಅಭ್ಯಾಸವಿದೆಯೇ ಎಂದರೆ, ಸಾಕ್ಷಿ ಅವಾಗಅವಾಗ ನೋಡುತ್ತೇನೆ ಎನ್ನುತ್ತಾರೆ.

35. ಈ ಕೇಸಿಗೆ ಸಂಬಂದಿಸಿದಂತೆ ದಿಃ10.06.2024 ರಿಂದ ಟಿವಿ ಮಾಧ್ಯಮದಲ್ಲಿ ನ್ಯೂಸ್ ಬರುತ್ತಿದೆ ಎಂದರೆ ಸರಿ. ಎಲ್ಲಾ ಟಿವಿ ಚಾನೆಲ್‌ಗಳಲ್ಲಿ ಈ ಪ್ರಕರಣದ ಬಗ್ಗೆ ನ್ಯೂಸ್ ಪ್ರಸಾರವಾಗುತ್ತಿತ್ತು ಎಂದರೆ ಸರಿ. ದಿಃ19.06.2024 ರಂದು ಪೊಲೀಸರುನನಗೆ ನೋಟೀಸ್ ನೀಡುವವರೆಗೆ ಮತ್ತು ದಿಃ20.06.2024 ರಂದು ನಾನು ಪೊಲೀಸರ ಮುಂದೆ ಹಾಜರು ಆಗುವವರೆಗೆ ಟಿವಿಯಲ್ಲಿ ಈ ಪ್ರಕರಣದ ಬಗ್ಗೆ ಟಿವಿಯಲ್ಲಿ ನ್ಯೂಸ್ ಪ್ರಸಾವಾಗುತ್ತಿತ್ತು ಎಂದರೆ ಸರಿ. ನಾನು ಸರಿದ ನ್ಯೂಸ್‌ನ್ನು ಗಮನಿಸಿದ್ದೇನೆ ಎಂದರೆ ಸರಿ.

36. ದಿಃ10.06.2024 ರ ಮುಂಚೆ ಟಿವಿ ಮಾಧ್ಯಮಗಳಲ್ಲಿ ಈ ಪ್ರಕಣದ ಬಗ್ಗೆ ನ್ಯೂಸ್ ಪ್ರಚಾರವಾಗುವ ಮುನ್ನ ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವುದೇ ದೃಶ್ಯಾವಳಿಗಳು ನನ್ನ ಮೊಬೈಲ್‌ನಲ್ಲಿ ಇರಲಿಲ್ಲ ಎಂದರೆ ಸರಿ.

37. ದಿಃ25.06.2024 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಳ್ಳಲು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ದಿಃ20.06.2024 ರಂದು ನಾನು ಪೊಲೀಸರ ಮುಂದೆ ವಿಚಾರಣೆಗೆ ಹಾಜರು ಆಗಿದ್ದೆ ಎಂದರೆ ಸರಿ. ಅಲ್ಲಿಯವರೆಗೆ ನಾನು ಟಿವಿ ಮಾಧ್ಯಮಗಳಲ್ಲಿ ಈ ಪ್ರಕರಣದ ಬಗ್ಗೆ ನೋಡಿದ ವಿಷಯಗಳು ನನ್ನ ಮನಸ್ಸಿ ನಲ್ಲಿ ಇದ್ದವು ಎಂದರೆ

ಸರಿ. ಈ ಪ್ರಕರಣದ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇರಲಿಲ್ಲ ಎಂದರೆ ಸರಿ.

38. ನನ್ನ ಸ್ನೇಹಿತ ಪುನೀತ್(ಚಾ.ಸಾ.91) ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನನಗೆ ನೀಡಿರಲಿಲ್ಲ ಎಂದರೆ ಸರಿ. ದಿಃ20.06.2024 ರಂದು ನಾನು ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ನನಗೆ ಈ ಪ್ರಕಣದ ಬಗ್ಗೆ ಏನಾದರು ಮಾಹಿತಿ ಇದೆಯಾ ಎಂದು ಕೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಪೊಲೀಸರಿಗೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ತಿಳಿಸಿದ್ದೆ ಎಂದರೆ ಸರಿ. ಆಗ ಪೊಲೀಸರು ನನಗೆ ನನ್ನ ಫೋನ್ ಕೊಡಬೇಕು ಎಂದು ತಿಳಿಸಿದ್ದರು ಎಂದರೆ ಸರಿ. ಅದರಂತೆ ನಾನು ಪೊಲೀಸರಿಗೆ ನನ್ನ ಮೊಬೈಲ್‌ನ್ನು ಕೊಟ್ಟಾಗ ಈ ಪ್ರಕರಣದ ಬಗ್ಗೆ ಯಾವುದೇ ದೃಶ್ಯಾವಳಿಗಳು ಇರಲಿಲ್ಲ ಎಂದರೆ ಸರಿ.

39. ದಿಃ20.06.2024 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಮೊಬೈಲ್‌ನ್ನು ಪಡೆದುಕೊಂಡು ನನ್ನನ್ನು ವಿಚಾರಣೆಗೆ ಕರೆದುಕೊಂಡು ಬಂದಾಗ ಬರಬೇಕು ಎಂದು ತಿಳಿಸಿದರು ಎಂದರೆ ಸರಿ. ದಿಃ25.06.2024 ರಂದು ಪೊಲೀಸರು ನನಗೆ ಕರೆ ಮಾಡಿ ನ್ಯಾಯಾಲಯದಲ್ಲಿ ನಿಮ್ಮ ಹೇಳಿಕೆ ಪಡೆದುಕೊಳ್ಳಬೇಕು ಹಾಗೂ ಬರಬೇಕು ಎಂದು ತಿಳಿಸಿದ್ದರು ಎಂದರೆ ಸರಿ. ಪೊಲೀಸರು ನನ್ನನ್ನು ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗುವ ಮೊದಲು ಈ ಪ್ರಕರಣದ ಬಗ್ಗೆ ಮಾಹಿತಿ ಕೊಟ್ಟು ರೇಣುಕಾಸ್ವಾಮಿ

ಕೊಲೆ ಬಗ್ಗೆ ಹೇಳಿಕೆ ನೀಡಬೇಕು ಹಾಗೂ ಇದೇ ರೀತಿ ಹೇಳಿಕೆ ನೀಡಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ.

40. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡುವಾಗ ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾದ ವಿವರಣೆ ಬಿಟ್ಟು ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿ. ಟಿವಿ ಮತ್ತು ಪೇಪರ್ ಗಳಲ್ಲಿ ಬಂದಿದ್ದ ಮಾಹಿತಿಯನ್ನು ಮನಸ್ಸಿ ನಲ್ಲಿ ಇಟ್ಟುಕೊಂಡು ಅದನ್ನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಯಾರು ಹೊಡೆದಿದ್ದಾರೆ ಮತ್ತು ಯಾರು ಈ ಕೃತ್ಯ ಮಾಡಿರುತ್ತಾರೆ ಎಂದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ನ್ಯಾಯಾಧೀಶರ ಮುಂದೆ ಟಿವಿಯಲ್ಲಿ ಈ ರೀತಿ ವಿಷಯಗಳು ಬರುತ್ತಾ ಇದೆ ಅದನ್ನು ನಾನು ನೋಡಿದ್ದರಿಂದ ಅದು ನನಗೆ ಗೊತ್ತಾಯಿತು, ಮತ್ತು ನನಗೆ ಟಿವಿ ನೋಡಿ ಗೊತ್ತಾಗಿರುವುದನ್ನು ಹೇಳಿದ್ದೇನೆ ಎಂದರೆ, ಸಾಕ್ಷಿ ಹೌದು ಎನ್ನುತ್ತಾರೆ.

41. ಪುನೀತ್ ನನಗೆ ಯಾರನ್ನು, ಯಾರೋ ಕರೆದುಕೊಂಡು ಬಂದಿದ್ದಾರೆ ಎಂದು ನನಗೆ ಮುಂದೆ ಹೇಳಿರುವುದಿಲ್ಲ. ಪುನೀತ್ ನನಗೆ ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಕರೆದುಕೊಂಡು ಬಂದಿದ್ದಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದ ಬಗ್ಗೆ ನನ್ನ ಮೊಬೈಲ್‌ಗೆ ಯಾವುದೇ ಇಮೇಜ್ ಮತ್ತು ವಿಡಿಯೋವನ್ನು ನಾನು ಡಿಲೀಟ್

ಮಾಡಿರುವುದಿಲ್ಲ.

42. ದಿಃ20.06.2024 ರಂದು ಪೊಲೀಸರು ನನ್ನ ಮೊಬೈಲ್‌ನ್ನು ಪಡೆದುಕೊಂಡು ಅವರಿಟ್ಟ ಬರವಣಿಗೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ದಿಃ20.06.2024 ರಂದು ಪೊಲೀಸರು ನೋಟೀಸ್ ಗೆ ಮತ್ತು ಮೊಬೈಲ್ ವಶಪಡಿಸಿಕೊಂಡ ಬಗ್ಗೆ ನನ್ನ ಸಹಿಗಳನ್ನು ಪಡೆದುಕೊಂಡಿರುವುದನ್ನು ಹೊರತುಪಡಿಸಿ, ಬೇರೆ 4-5 ಸಹಿಗಳನ್ನು ಪಡೆದಿರುತ್ತಾರೆ ಎಂದರೆ, ಸಾಕ್ಷಿ ಮೊಬೈಲ್ ಪಡೆದುಕೊಂಡ ಬಗ್ಗೆ ಮತ್ತು ನೋಟೀಸ್‌ಗೆ ಸಹಿ ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ.

43. ನಿ.ಪಿ.137 ಪಂಚನಾಮೆಯಲ್ಲಿ ಪೊಲೀಸರು ಬರವಣಿಗೆ ಮಾಡಿದ್ದು, ಅದರಲ್ಲಿ ಏನು ಬರವಣಿಗೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ, ಸಾಕ್ಷಿ  ಅದು ಮೊಬೈಲ್ ಗೆ ಮಾತ್ರ ಸಂಬಂದಿಸಿದೆ ಎನ್ನುತ್ತಾರೆ. ಆ ಸಮಯದಲ್ಲಿ ಪೊಲೀಸರು ನಿಮ್ಮ ಮೊಬೈಲ್ ವಶಪಡಿಸಿಕೊಳ್ಳುತ್ತಿರುವುದಾಗಿ ಹೇಳಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿ. ನಾನು ನ್ಯಾಯಾಧೀಶರ ಮುಂದೆ ಕೊಟ್ಟ ಹೇಳಿಕೆ, ನಾನು ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾದ ಮಾಹಿತಿಗಳ ಆಧಾರದ ಮೇಲೆ ನೀಡಿದ್ದು, ಈ ಕುರಿತು ನಿಮಗೆ ಸತ್ಯಾಂಶ ಗೊತ್ತಿಲ್ಲ ಎಂದರೆ ಸರಿ.

44. ನ್ಯಾಯಾಧೀಶರ ಮುಂದೆ ನಾನು ನೀಡಿದ ಸಂಪೂರ್ಣ ಹೇಳಿಕೆ, ನಾನು ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾದ ಮಾಹಿತಿಗಳ ಆಧಾರದ ಮೇಲೆ ನೀಡಿದ್ದೇನೆ ಎಂದರೆ ಸರಿ. ಸಾಮಾನ್ಯವಾಗಿ ಸಾರ್ವಜನಿಕರು Celebrities ಕಂಡಾಗ ಅವರೊಂದಿಗೆ Selfie, photo ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಪೊಲೀಸರ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ದಿಃ08.06.2024 ರಂದು ಪುನೀತ್ ನನ್ನ ಮೊಬೈಲ್‌ಗೆ ಒಂದು ಫೋಟೋ ನನ್ನ ವಾಟ್ಸಅಪ್ ಗೆ ಕಳುಹಿಸಿದ್ದ ಎಂದು ಹೇಳಿರುವುದಿಲ್ಲ ಎಂದರೆ, ಸಾಕ್ಷಿ ಹೇಳಿರುತ್ತೇನೆ ಎನ್ನುತ್ತಾರೆ.

45. ಪುನೀತ್ ನನಗೆ ಒಬ್ಬ ವ್ಯಕ್ತಿ ಮಲಗಿದ ತರಹಃ ಇದ್ದ ಒಂದು ಫೋಟೋವನ್ನು ನನಗೆ ಕಳುಹಿಸಿದ್ದ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ನಾನು ಪುನೀತ್‌ಗೆ ಕರೆ ಮಾಡಿ ಕೇಳಿದಾಗ, ಈ ವ್ಯಕ್ತಿ ದರ್ಶನ ಪ್ರೇಯಸಿಯಾದ ಪವಿತ್ರ ಗೌಡರವರಿಗೆ ಕೆಟ್ಟದಾಗಿ ಮೆಸೇಜ್ ಮತ್ತು ಫೋಟೋಗಳನ್ನು ಹಾಕುತ್ತಿದ್ದ ವ್ಯಕ್ತಿ ಈತನನ್ನು ನಾನು ಕೆಲಸ ಮಾಡುವ ಶೆಡ್ ಗೆ ಚಿತ್ರದುರ್ಗದ ಹುಡುಗರು ಕರೆದುಕೊಂಡು ಬಂದಿರುತ್ತಾರೆ ಎಂದು ಹೇಳಿದ್ದ ಎಂದು ಹೇಳಿಕೆ ನೀಡಿಲ್ಲ ಎಂದರೆ ಸರಿ.

46. ನಾನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ನಾನು ಆತನಿಗೆ

ದರ್ಶನ್ ಮನೆಯಲ್ಲಿ ಕೆಲಸ ಮಾಡುವ ಪವನ್, ಧನರಾಜ್ ಮತ್ತು ನಂದೀಶ ರವರು ಹೊಡೆದಿರುತ್ತಾರೆ ಎಂದು ತಿಳಿಸಿದ್ದ, ಅದಕ್ಕೆ ನಾನು ಹೌದಾ, ಈ ಪಾರ್ಟಿ ಈಗ್ಗೆ ಮಾಡುತ್ತಿದ್ದಾನಾ ಎಂದು ಕೇಳಿದೆ. ನಂತರ ಆ ಫೋಟೋ ಮತ್ತು ವಿಡಿಯೋವನ್ನು ನಾನು ಡಿಲೀಟ್ ಮಾಡಿರುತ್ತೇನೆ ಎಂದು ಹೇಳಿಕೆ  ನೀಡಿಲ್ಲ ಎಂದರೆ ಸರಿ.

47. ನಿ.ಪಿ.136 ಫೋಟೋವನ್ನು ನಾನು ಪೊಲೀಸ್ ಠಾಣೆಯಲ್ಲಿ ನನ್ನ ಮೊಬೈಲ್‌ನ್ನು ಹಾಜರುಪಡಿಸುವಾಗ ತೆಗೆದ ಫೋಟೋ ಎಂದರೆ ಸರಿ. ಆ ದಿನ ಈ ಫೋಟೋವನ್ನು ನೋಡಿರಲಿಲ್ಲ ಮತ್ತು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಪೊಲೀಸರು ನನಗೆ ತಿಳಿಸಿದಂತೆ ನಾನು ನನ್ನ ಫೋನ್‌ನ್ನು ಹಾಜರುಪಡಿಸಿದ್ದನ್ನು ಹೊರತುಪಡಿಸಿ, ಈ ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**<u>ಪಾಟೀಸವಾಲು 1 ಮತ್ತು 12 ನೇ ಆರೋಪಿಗಳ ಪರ ಶ್ರೀ.ಎಸ್.ಡಿ ವಕೀಲರ ಪರವಾಗಿ ಶ್ರೀ. ಎಸ್.ಬಿ ವಕೀಲರಿಂದಃ</u>**

48. ಪಟ್ಟಣಗೆರೆಯಲ್ಲಿ Intact Auto Park ಶೆಡ್ ರೀತಿ ಬೇರೆ ಬೇರೆ ಶೆಡ್‌ಗಳು ಇವೆ ಎಂದರೆ ಸರಿ. Intact Auto Park ಶೆಡ್ ತರಹ Periplus Services ಎಂಬ ಇನ್ನೊಂದು ಶೆಡ್ ಇದೆ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.  Intact Auto Park ಶೆಡ್ ನಿಂದ Periplus

Services ಶೆಡ್ ಸುಮಾರು 1 ಕೀ.ಮಿ ಅಂತರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**ಪಾಟಿಸವಾಲು 3 ನೇ ಆರೋಪಿ ಪರ ಶ್ರೀ.ಡಿ.ಎಸ್.ಎಸ್ ವಕೀಲರ ಪರವಾಗಿ ಶ್ರೀ. ಆರ್.ಎಸ್.ಎನ್ ವಕೀಲರಿಂದಃ**

3 ನೇ ಆರೋಪಿ ಪರ ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಪಾಟಿಸವಾಲು 4,6 ರಿಂದ 10,13 ಮತು 15 ರಿಂದ 17 ನೇ ಆರೋಪಿಗಳ ಪರ ಶ್ರೀ. ಆರ್.ಆರ್.ವಕೀಲರಿಂದಃ**

ಮೇಲೆ ಹೇಳಿದ ಆರೋಪಿಗಳ ಪರ ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಪಾಟಿಸವಾಲು 5 ನೇ ಆರೋಪಿ ಪರ ಶ್ರೀ. ಕೆ.ಆರ್.ಎಸ್ ವಕೀಲರ ಪರವಾಗಿ ಶ್ರೀ. ಕೆಪಿಪಿ ವಕೀಲರಿಂದಃ**

ಮೇಲೆ ಹೇಳಿದ ಆರೋಪಿ ಪರ ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಪಾಟಿಸವಾಲು 11 ನೇ ಆರೋಪಿ ಪರ ಶ್ರೀ. ಎಂಜಿಎಸ್ ವಕೀಲರಿಂದಃ**

49. ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಲು ಬರಬೇಕು ಎಂದು ಪೊಲೀಸರು ನನಗೆ ನೋಟೀಸ್ ನೀಡಿದ್ದರು. ನ್ಯಾಯಾಲಯಕ್ಕೆ ನಾನು ಮತ್ತು 3 ಜನ ಪೊಲೀಸರು ಹೋಗಿದ್ದರು.

**ಪ್ರಶ್ನೆಃ** ನಾನು ನ್ಯಾಯಾಲಯಕ್ಕೆ ಹೇಳಿಕೆ ನೀಡಲು ಹೋದಾಗ ನ್ಯಾಯಾಲಯದ ಒಳಗಡೆ ಪೊಲೀಸರು ಇದ್ದರೇ?

**ಉತ್ತರಃ** ಅವರು ಕೆಳಗಡೆ ಇದ್ದರು.

50. ನಾನು ನ್ಯಾಯಾಲಯಕ್ಕೆ ಹೋಗುವ ಮುನ್ನ ಮೊದಲು ಪೊಲೀಸ್ ಠಾಣೆಗೆ ಹೋಗಿ ಅಲ್ಲಿ 1 ಗಂಟೆ ಇದ್ದು ನಂತರ ನ್ಯಾಯಾಲಯಕ್ಕೆ ಹೋಗಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ಈ ಪ್ರಕರಣದ ಬಗೆಗ ಹಾಗೂ ಮಾಧ್ಯಮಗಳಲ್ಲಿ ಪ್ರಸಾರವಾದ ಘಟನೆಗಳ ಬಗ್ಗೆ ನನ್ನೊಂದಿಗೆ ಚರ್ಚೆ ಮಾಡಿದ್ದರು ಎಂದರೆ ಸರಿಯಲ್ಲ.

2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಮುಂದುವರೆದ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

SC. 1319/2024
PW-22, CW-90

**ಪಾಟಿಸವಾಲು 14 ನೇ ಆರೋಪಿ ಪರ ಶ್ರೀ. ಎಡಿ ವಕೀಲರಿಂದಃ**

14 ನೇ ಆರೋಪಿ ಪರ ವಕೀಲರು ಹಾಜರು ಇದ್ದು, ಅವರು ಈಗಾಗಲೇ ಕಲಂ 307 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದರಿಂದ, ಸದರಿ ಅರ್ಜಿ ವಿಲೆಯಾಗುವವರೆಗೆ ಅವರ ಪರ ಪಾಟಿಸವಾಲನ್ನು ಮುಂದೂಡಲು ಕೋರಿರುತ್ತಾರೆ. ಅವರ ಕೋರಕೆ ಮೆರೆಗ ಪಾಟಿಸವಾಲು ಮುಂದೂಡಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**